ಈ) ಕರ್ನಾಟಕ ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ಪದ್ಧತಿ(ನಿಯಂತ್ರಣ) ಆದೇಶ 1992 ರಡಿ ಹೊಸ ನ್ಯಾಯಬೆಲೆ ಅಂಗಡಿಗಳ ಮಂಜೂರಾತಿಗೆ ಅವಕಾಶ ಇರುತ್ತದೆ ಸದರಿ ನಿಯಮಗಳ ಪ್ರಕಾರ ಹೊಸ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡುವ ಪ್ರಕ್ರಿಯೆ ನಡೆಯುತ್ತಿದೆ

233 (360) ಶ್ರೀ ಶಿವರಾಮು ಬಿ (ಗಂಡಸಿ)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಹಾಸನ ಜಿಲ್ಲೆಯ ಹೇಮಾವತಿ ಸಕ್ಕರೆ ಕಾರ್ಖಾನೆ ನಷ್ಟದಲ್ಲಿದೆಯೇ? ಈಗ ಎಷ್ಟು ನಷ್ಟದಲ್ಲಿರುತ್ತದೆ?

ಆ) ನಷ್ಟ ಹೊಂದಲು ಕಾರಣಗಳೇನು?

ಇ) ಹಿಂದಿನ 3 ವರ್ಷದಲ್ಲಿ ಕಬ್ಬು ಅರೆಯಲು ಹೊಂದಿದ್ದ ಸಾಮರ್ಥ್ಯ, ಪ್ರಗತಿ, ಲಾಭ ಮತ್ತು ನಷ್ಟದ ಮಾಹಿತಿಯನ್ನು ವರ್ಷವಾರು ಒದಗಿಸುವುದು?

ಈ) ಸುಧಾರಣೆಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಜಿ ಟಿ ದೇವೇಗೌಡ

ಅ) ಕಾರ್ಖಾನೆಯು ಈ ಕೆಳಕಂಡ ಕಾರಣಗಳಿಂದ ನಷ್ಟ ಹೊಂದಿರುತ್ತದೆ

1 2001–02 ಮತ್ತು 2002–03 ನೇ ಸಾಲಿನಲ್ಲಿ ಸಕ್ಕರೆ ಮತ್ತು ಕಾಕಂಬಿಯ ಮಾರಾಟ ಬೆಲೆಗಳು ಗಣನೀಯವಾಗಿ ಇಳಿಕೆಯಾಗಿರುವುದು

2 ಸಕ್ಕರೆ ಉತ್ಪಾದನಾ ವೆಚ್ಚವು ಸಕ್ಕರೆ ದರಕ್ಕಿಂತ ಹೆಚ್ಚಾಗಿರುವುದು

3) ಕಾರ್ಖಾನೆಯ ಯಂತ್ರೋಪಕರಣ ಮತ್ತು ತಂತ್ರಜ್ಞಾನ ಹಳೆಯದಾಗಿರುವುದರಿಂದ ಸಕ್ಕರೆ ಇಳುವರಿ ಕಡಿಮೆಯಾಗಿರುವುದು

4 ಕಾರ್ಖಾನೆಯಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಸಿಬ್ಬಂದಿ ಇರುವುದು ಹಾಗೂ ಸಿಬ್ಬಂದಿಯು ತಾಂತ್ರಿಕ ಕೌಶಲ್ಯ ಹೊಂದಿಲ್ಲದಿರುವುದು

ವರ್ಷ	ಕಬ್ಬು ಅರೆಯುವ ಸಾಮರ್ಥ್ಯ	ಪ್ರಗತಿ (ಕಬ್ಬು ಅರೆದಿರುವುದು ಮೆ ಟನ್‌ಗಳಲ್ಲಿ)	ಲಾಭ (ರೂಲಕ್ಷಗಳಲ್ಲಿ)	ಕ್ರೂಢೀಕೃತ ನಷ್ಟ (ರೂ ಲಕ್ಷಗಳಲ್ಲಿ)
2004–05	1250	78325 021	320 58	667 56
2005–06	1250	154670 282	172 09	495 47
2006–07	1250	276085 383	23 38	472 09

ಕಾರ್ಖಾನೆಯ ಸಾಮರ್ಥ್ಯವನ್ನು ಹಾಲಿ ಇರುವ 1250 ಟಿಸಿಡಿಯಿಂದ ಕನಿಷ್ಠ 2500 ಟಿಸಿಡಿಗೆ ವಿಸ್ತರಣೆ ಮಡುವುದು ಮತ್ತು 40ಕೆ ಎಲ್ ಡಿ ಸಾಮರ್ಥ್ಯದ ಡಿಸ್ಟಿಲರಿ/ಎಥನಾಲ್ ಘಟಕ ಸ್ಥಾಪನೆ ಹಾಗೂ 12 5 ಮೆ ವ್ಯಾಟ್ ವಿಸ್ಯುತ್ ಘಟಕವನ್ನು ಅಳವಡಿಸಲು ಉದ್ದೇಶಿಸಿದ್ದು ಈ ಕಾರ್ಯಕ್ಕಾಗಿ ಕಾರ್ಖಾನೆಯು ಅಂದಾಜು ರೂ 7010 00 ಲಕ್ಷಗಳ ವೆಚ್ಚ ಭರಿಸಬೇಕಾಗುತ್ತೆ ಕಾರ್ಖಾನೆಯ ಈ ಪರಿಸ್ಥಿತಿಯಲ್ಲಿ ಇಷ್ಟು ಹಣವನ್ನು ಹೂಡುವುದು ಕಷ್ಟಸಾಧ್ಯವಾಗುತ್ತದೆ ಕಾರ್ಖಾನೆಯಲ್ಲಿನ ಆರ್ಥಿಕ ಪರಿಸ್ಥಿತಿ ಕಾರ್ಖಾನೆಯ ಉಂತ್ರೋಪಕರಣಗಳ ಪರಿಸ್ಥಿತಿ ಮತು ಕಾರ್ಖಾನೆಯ ವ್ಯಾಪ್ತಿಯಲ್ಲಿ ಲಭ್ಯವಿರುವ ಮತ್ತು ಅಭಿವೃದ್ಧಿ ಪಡಿಸಬಹುದಾದ ಕಬ್ಬಿನ ವಿವರ ಪರೊಶೀಲಿಸಿ ಕಾರ್ಖಾನೆಯ ವ್ಯಾಪ್ತಿಯಲ್ಲಿನ ರೈತರ ಹಿತದೃಷ್ಟಿಯಿಂದ ಆಡಳಿತ ಮಂಡಳಿ ಕ್ರಮವಹಿಸಬೇಕಾಗಿದೆ